08.04.2017 ಶನಿವಾರ

ಕ್ಕಮಗಳೂರು

ವಾತಾವರಣ

[illegible]

ಶ್ರೀ ರಾಮಾನುಜ ಜ್ಯೋತಿ ಭಕ್ತಿ ರಥಯಾತ್ರೆ ಆಗಮನ 19 ಕ್ಕೆ

[illegible]

ರೈತರು,ಇಲಾಖಾ ಅಧಿಕಾರಿಗಳ ಜತೆ ಬೀಳುಭೂಮಿಯ ಕುರಿತ ಸಭೆಯಲ್ಲಿ ಕಮ್ಮರಡಿ ಪ್ರಕಾಶ್

ರಾಜ್ಯ ಸರಕಾರದಿಂದ ಕೃಷಿಬೆಲೆ ಆಯೋಗ ರಚನೆ

ವಿಶ್ವವಾಣಿ ಸುದ್ದಿಮನೆ ಶೃಂಗೇರಿ

[illegible]

[illegible]

ರೈತರು,ಇಲಾಖಾ ಅಧಿಕಾರಿಗಳ ಜತೆ ಬೀಳುಭೂಮಿಯ ಕುರಿತು ನಡೆದ ಸಭೆಗೆ ಆಗಮಿಸಿದ ಪ್ರಕಾಶ್ ಕಮ್ಮರಡಿ [illegible] ಶಿವಶಂಕರ್ ಅವರ ತೋಟವನ್ನು ವೀಕ್ಷಿಸಿದರು.

[illegible]

> ತಹಸೀಲ್ದಾರ್ ಅವರ ನೇತೃತ್ವದಲ್ಲಿ ತೋಟಗಾರಿಕೆ,ಕೃಷಿ ಹಾಗೂ ಅಡಿಕೆ ಸಂಶೋಧನಾ ಕೇಂದ್ರಗಳು ಒಗ್ಗೂಡಿ ಮೇ ತಿಂಗಳಲ್ಲಿ ಮಲೆನಾಡಿನ ಮಣ್ಣು ಪರೀಕ್ಷೆ, ರೈತರ ವಿಮಾ ಯೋಜನೆ,ಕೃಷಿಯ ಆಧುನಿಕ ತಂತ್ರಜ್ಞಾನ ಸೌಲಭ್ಯ, ಉಪಬೆಳೆಗಳ ಮಾರುಕಟ್ಟೆಯ ಕಾರ್ಯಾಗಾರವನ್ನು ನಡೆಸಬೇಕು. ವಿಶೇಷ ತಜ್ಞರನ್ನು ಕರೆಸಿ ಮಾಹಿತಿ ನೀಡುವ ಹಾಗೂ ಮಲೆನಾಡಿನ ರೈತರ ಸಮಸ್ಯೆಗಳ ಬಗ್ಗೆ ಆಯೋಗದ ಮೂಲಕ ಸಹಕಾರ ನೀಡಲಾಗಿದೆ.
>
> - **ಪ್ರಕಾಶ್ ಕಮ್ಮರಡಿ**, ಕೃಷಿ ಬೆಲೆ ಆಯೋಗದ ಅಧ್ಯಕ್ಷ

[illegible]

> ಸಹಕಾರಿ ಬ್ಯಾಂಕ್‌ಗಳು ಒಂದು ಲಕ್ಷ ಬೆಳೆ ಸಾಲ ಮಾಡಿದರೆ ರು.5200ನ್ನು ವಿಮೆಗಾಗಿ ಪಡೆಯುತ್ತಾರೆ. ಇದರಿಂದ ನಮಗೆ ಯಾವುದೇ ಲಾಭವಿಲ್ಲ. ಒಂದು ವಿಮಾ ಯೋಜನೆಯು ಬೆಳೆ,ಆರೋಗ್ಯ, ಯಂತ್ರೋಪಕರಣ,ಜಾನುವಾರು, ಆಕಾಲಿಕ ಮರಣ,ಮಕ್ಕಳ ವಿದ್ಯಾಭ್ಯಾಸಕ್ಕೆ ಪೂರಕವಾಗಿರಬೇಕು.
>
> - **ಕೆಲವಳ್ಳಿ ಗುಂಡಪ್ಪ**, [illegible] ಅಧ್ಯಕ್ಷ

> ಕೃಷಿ ಸಂಬಂಧಿ ಬಯಸುವ ಯುವಕರ ಸಂಖ್ಯೆ [illegible] ಕಡಿಮೆಯಾಗುತ್ತಿದೆ. ಹೊಟ್ಟೆಪಾಡಿಗಾಗಿ ಯುವಕರು ಮಹಾನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಹೀಗಾದರೆ ಕೃಷಿಯಿಂದ ಮಲೆನಾಡಿನಲ್ಲಿ ಬದುಕು ನಿರ್ವಹಿಸುವುದು ಕಷ್ಟ. ಆಯೋಗ [illegible] ಯೋಜನೆಯು ಎಲ್ಲ ರೈತರಿಗೆ ಸಹಕಾರ ನೀಡಬೇಕು.
>
> - **ಶ್ರೀಮೂರ್ತಿ [illegible]**, [illegible]

[illegible]

[illegible]

ಪಕ್ಷ ಸಂಘಟಿತವಾಗಿ ಬೆಳೆಯಲು ನಾಯಕರ ಪಾತ್ರ ಅಪಾರ

ವಿಶ್ವವಾಣಿ ಸುದ್ದಿಮನೆ [illegible]

ನಾನಾ ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು

ಸ್ಥಾಪನಾ ದಿನಾಚರಣೆ

ಶದಲ್ಲೇ ಪ್ರಬಲ ಪಕ್ಷ

ಕ್ಷೇಮೆ ನಾಳೆ

ಮಾದರಿ ಗುತ್ತಿಗೆ ಕಾಯ್ದೆ ಜಾರಿ ಅಗತ್ಯ

ಮಾರುಕಟ್ಟೆಯಲ್ಲಿ ಬೆಲೆ ಸ್ಥಿರತೆಗೆ ಪ್ರಯತ್ನ | ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಹೇಳಿಕೆ

■ ವಿಜಯವಾಣಿ ಸುದ್ದಿಜಾಲ ಶೃಂಗೇರಿ

ರಾಜ್ಯದಲ್ಲಿ 21 ಲಕ್ಷ ಹೆಕ್ಟೇರ್ ಭೂಮಿ ಬೀಳು ಬಿಡಲಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಶೇ.8ರಷ್ಟು ಭೂಮಿ ಬೀಳು ಬಿದ್ದಿದೆ. ರೈತರು ಬೀಳು ಬಿಟ್ಟ ಪ್ರದೇಶಗಳನ್ನು ಗುತ್ತಿಗೆ ನೀಡುವ 'ಮಾದರಿ ಗುತ್ತಿಗೆ ಕಾಯ್ದೆ'ಯನ್ನು ಕೇಂದ್ರ ಸರ್ಕಾರ ಜಾರಿಗೆ ತರಬೇಕಿದೆ ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಪ್ರಕಾಶ್ ಕಮ್ಮರಡಿ ಹೇಳಿದರು.

ತಾಲೂಕು ಕಚೇರಿಯಲ್ಲಿ ಶುಕ್ರವಾರ ರೈತರು, ವಿವಿಧ ಇಲಾಖೆ ಅಧಿಕಾರಿಗಳ ಜತೆ 'ಬೀಳುಭೂಮಿ' ಕುರಿತು ನಡೆದ ಸಭೆಯಲ್ಲಿ ಮಾತನಾಡಿ, ಒಟ್ಟು 5.97 ಲಕ್ಷ ಹೆಕ್ಟೇರ್ ಭೂಮಿ ಕೃಷಿಯೇತರ ಚಟುವಟಿಕೆಗೆ ಬಳಸಲಾಗಿದೆ ಎಂದರು.

ಶೃಂಗೇರಿಯಲ್ಲಿ ನಡೆದ 'ಬೀಳುಭೂಮಿ' ಕುರಿತು ನಡೆದ ಸಭೆಯಲ್ಲಿ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಪ್ರಕಾಶ್ ಕಮ್ಮರಡಿ ಮಾತನಾಡಿದರು. ತಾಪಂ ಅಧ್ಯಕ್ಷೆ ಜಯಶೀಲಾ, ಸ್ಥಾಯಿ ಸಮಿತಿ ಅಧ್ಯಕ್ಷ ರಾಮಕೃಷ್ಣ ಇತರರಿದ್ದರು.

> ಸಹಕಾರ ಬ್ಯಾಂಕ್‌ಗಳು ಬೆಳೆ ವಿಮೆ ಕಂತನ್ನು 5200 ರೂ. ಪಡೆಯುತ್ತಾರೆ. ಇದರಿಂದ ನಮಗೆ ಯಾವುದೇ ಲಾಭವಿಲ್ಲ. ಒಂದು ವಿಮಾ ಯೋಜನೆಯು ಬೆಳೆ, ಆರೋಗ್ಯ, ಯಂತ್ರೋಪಕರಣ, ಜಾನುವಾರು, ಆಕಾಲಿಕ ಮರಣ, ಮಕ್ಕಳ ವಿದ್ಯಾಭ್ಯಾಸಕ್ಕೆ ಪೂರಕವಾಗಿರಬೇಕು.
>
> | ಕಿಲವಳ್ಳಿ ಗುಂಡಪ್ಪ ತಾಲೂಕು ರೈತ ಸಂಘದ ಅಧ್ಯಕ್ಷ

ನಮ್ಮಲ್ಲಿರುವ ಅತಿಸಣ್ಣ ರೈತರು, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ ಮತ್ತು ಪಂಗಡದವರು ಕೃಷಿ ಭೂಮಿಯನ್ನು ಹೆಚ್ಚಾಗಿ ಬೀಳು ಬಿಟ್ಟಿದ್ದಾರೆ. ಕೇರಳದ ಕೃಷಿಯ ವಿಧಾನಗಳನ್ನು ನಮ್ಮ ರಾಜ್ಯದಲ್ಲೂ ಅಳವಡಿಸಿಕೊಳ್ಳುವ ಅಗತ್ಯವಿದೆ. ರೈತರಿಗೆ ನೀಡುವ ಭರವಸೆಗಳು ಭರವಸೆಯಾಗಿ ಉಳಿದುಕೊಂಡಿದೆ. ಪ್ರತಿ ಯೋಜನೆಯ ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆ ನಿಗದಿತ ಸಮಯದಲ್ಲಿ ನೀಡಬೇಕು ಎಂದರು.

ಮಲೆನಾಡಿನ ಬಾಳೆ, ಏಲಕ್ಕಿ, ಹೆಗ್ಗೆ ಮೊದಲಾದ ಸಾವಯವ ಭತ್ತ ಆರೋಗ್ಯಕ್ಕೆ ಉತ್ತಮ. ಆದರೆ ಮಲೆನಾಡಿನಲ್ಲಿ ಭತ್ತ ಬೆಳೆಯುವುದು ಅತ್ಯಂತ ದುಬಾರಿಯಾಗಿದೆ. ಹಾಗಾಗಿ ಉಪಬೆಳೆಗಳನ್ನು ಬೆಳೆಯಲು ರೈತರು ಚಿಂತನೆ ಮಾಡಬೇಕು. ಗೇರು, ಕೋಕೋ, ಕಾಳುಮೆಣಸು, ವಿಳ್ಯದೆಲೆ ಮುಂತಾದ ಬೆಳೆ ಬೆಳೆದರೆ ಆರ್ಥಿಕವಾಗಿ ಸದೃಢರಾಗಬಹುದು ಎಂದರು.

ರಾಜ್ಯದಲ್ಲಿ 800ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಮಸ್ಯೆ ಅರಿತು ಪರಿಹಾರ ನೀಡುವಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು. ಸರ್ಕಾರಿ ನೌಕರರ ಸಂಬಳಕ್ಕೆ ಏರಿಸಿದಾಗ ಅವರು ಸಂತೋಷಪಡುತ್ತಾರೆ. ರೈತರ ಆದಾಯ ಕೂಡ ದ್ವಿಗುಣವಾಗಬೇಕಿದ್ದು, ಇದಕ್ಕಾಗಿ ಸರ್ಕಾರ ಹೆಚ್ಚಿನ ಸಹಕಾರ ನೀಡಬೇಕಿದೆ ಎಂದು ಅಭಿಪ್ರಾಯಪಟ್ಟರು.

ಆಯೋಗ ಶಿಫಾರಸು ಕೇಂದ್ರವಷ್ಟೆ

ಕೃಷಿ ಬೆಲೆ ಆಯೋಗ ಒಂದು ಡಯಾಗ್ನೊಸ್ಟಿಕ್ ಸೆಂಟರ್ ಇದ್ದಂತೆ. ಶುಗರ್ ಜಾಸ್ತಿ ಇದೆ ಎಂದು ವೈದ್ಯರಿಗೆ ಹೇಳುವುದು ಸೆಂಟರ್‌ನ ಮುಖ್ಯ ಕರ್ತವ್ಯ, ಅದಕ್ಕೆ ಯಾವ ರೀತಿಯ ಔಷಧ ನೀಡಬೇಕು ಎಂಬುದು ವೈದ್ಯರ ಜವಾಬ್ದಾರಿ ಎಂದು ಡಾ. ಪ್ರಕಾಶ್ ಕಮ್ಮರಡಿ ಸೂಕ್ಷ್ಮವಾಗಿ ಹೇಳಿದರು. ಬೇರೆ ಯಾವುದೇ ರಾಜ್ಯದಲ್ಲಿ ಈ ಆಯೋಗ ಆರಂಭವಾಗಿಲ್ಲ. ಆಯೋಗ ಎಂದರೆ ಶಿಫಾರಸಿನ ವ್ಯವಸ್ಥೆ. ಹಾಗೆಯೇ ನಾವು ಮಾಡುವ ಶಿಫಾರಸಿನ ವರದಿಯನ್ನು ಸರ್ಕಾರದ ಮುಂದೆ ಇಡುತ್ತೇವೆ. ಸಮಸ್ಯೆಗೆ ಉತ್ತರ ಕಂಡುಕೊಳ್ಳುವುದು ಸರ್ಕಾರದ ಕೆಲಸ ಎಂದರು. ಹಾಗೆಯೇ ಕೆಟ್ಟು ಹೋದ ಬಸ್ ಪುನಃ ಚಲಿಸಬೇಕಾದರೆ ಚಾಲಕನ ಜತೆಗೆ ಬಸ್ ನೂಕುವವರು ಕೂಡ ಬೇಕು. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಅಭಿವೃದ್ಧಿ ಕಾರ್ಯ ನಿರ್ವಹಿಸುವಾಗ ಅಧಿಕಾರಿಗಳು, ಜನಪ್ರತಿನಿಧಿಗಳು ಜತೆಗೆ ಜನರ ಸಂಪೂರ್ಣ ಸಹಕಾರ ಅತಿಮುಖ್ಯ ಎಂದು ಹೇಳಿದರು.

ಮೇನಲ್ಲಿ ಕಾರ್ಯಾಗಾರ

ತಹಸೀಲ್ದಾರ್ ನೇತೃತ್ವದಲ್ಲಿ ತೋಟಗಾರಿಕೆ, ಕೃಷಿ ಹಾಗೂ ಅಡಕೆ ಸಂಶೋಧನಾ ಕೇಂದ್ರಗಳು ಒಗ್ಗೂಡಿ ಮೇ ತಿಂಗಳಲ್ಲಿ ಮಲೆನಾಡಿನ ಮಣ್ಣು ಪರೀಕ್ಷೆ, ರೈತರ ವಿಮಾ ಯೋಜನೆ, ಕೃಷಿಯ ಆಧುನಿಕ ತಂತ್ರಜ್ಞಾನ ಸೌಲಭ್ಯ, ಉಪಬೆಳೆಗಳ ಮಾರುಕಟ್ಟೆ ಬಗ್ಗೆ ಕಾರ್ಯಾಗಾರ ನಡೆಸಬೇಕು ಎಂದು ಪ್ರಕಾಶ್ ಕಮ್ಮರಡಿ ತಿಳಿಸಿದರು. ವಿಶೇಷ ತಜ್ಞರನ್ನು ಕರೆಸಿ ಮಾಹಿತಿ ನೀಡುವ ಹಾಗೂ ಮಲೆನಾಡಿನ ರೈತರ ಸಮಸ್ಯೆಗಳ ಪರಿಹಾರಕ್ಕೆ ಆಯೋಗದ ಮೂಲಕ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

> ತಾಲೂಕಿನಲ್ಲಿ ಭತ್ತ ಬೆಳೆಯುವ ರೈತರ ಸಂಖ್ಯೆ ಕಡಿಮೆಯಾಗುತ್ತಿದೆ. ಶೇ.15ರಷ್ಟು ಭತ್ತ ಬೆಳೆಯುವ ಭೂಮಿ ವಾಣಿಜ್ಯ ಉದ್ದೇಶಕ್ಕೆ ಬಳಸಲಾಗುತ್ತಿದೆ. ಮಲೆನಾಡಿನಲ್ಲಿ ಭತ್ತ ಬೆಳೆಯಬೇಕಾದರೆ ಒಂದು ಎಕರೆಗೆ 10 ಸಾವಿರ ರೂ. ವಿಶೇಷ ಪ್ಯಾಕೇಜ್ ಅನ್ನು ಸರ್ಕಾರ ಘೋಷಿಸಬೇಕು.
>
> | ಕಲ್ಕೋಡಿ ಶ್ರೀನಿವಾಸ್ ಕೃಷಿಕ

ಮಂಡಳಿ ಸ್ಥಾಪನೆಗೆ ವರದಿ: ಅಡಕೆ ಬೆಳೆಗೆ ಸಂಬಂಧಿಸಿದಂತೆ ಮಂಡಳಿ ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ ಎಂದು ಪ್ರಕಾಶ್ ಕಮ್ಮರಡಿ ತಿಳಿಸಿದರು. ಅಡಕೆ ಹಳದಿ ಎಲೆ ರೋಗದ ಬಗ್ಗೆ ಈವರೆಗೆ ಯಾವುದೇ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಅಡಕೆ ಉತ್ಪಾದನೆ ಕಡಿಮೆಯಾದಾಗ ಬೆಲೆ ಏರಿಕೆ, ಹೆಚ್ಚಿನ್ನ ಬೆಲೆ ಇಳಿಕೆಯಾಗುತ್ತದೆ. ಆದರೆ ಅಡಕೆಗೆ ಸ್ಥಿರ ಬೆಲೆ ಸಿಗಬೇಕು. ಮಾರುಕಟ್ಟೆಯ ಸ್ಥಿರೀಕರಣ ನಿರಂತರವಾಗಿರಬೇಕು ಎಂದು ಮನವರಿಕೆ ಮಾಡಿಕೊಡಲಾಗಿದೆ ಎಂದರು.

ತಾಪಂ ಅಧ್ಯಕ್ಷೆ ಜಯಶೀಲಾ, ಸ್ಥಾಯಿ ಸಮಿತಿ ಅಧ್ಯಕ್ಷ ಅಂಬ್ಲೂರು ರಾಮಕೃಷ್ಣ, ಜಿಪಂ ಸದಸ್ಯರಾದ ಬಿ.ಶಿವಶಂಕರ್, ಶಿಲ್ಪಾ ರವಿ, ತಹಸೀಲ್ದಾರ್ ಪದ್ಮನಾಭ ಶಾಸ್ತ್ರಿ, ತಾಪಂ ಇಒ ಅಪ್ಪಣ್ಣ ಹಾಜರಿದ್ದರು.

ಪೊಲೀಸರ ದೌರ್ಜನ್ಯ ತಡೆಗೆ ದೂರು ಪ್ರಾಧಿಕಾರ ಸ್ಥಾಪನೆ

ವಕೀಲ ಕೆ.ಎನ್.ಚಂದ್ರಶೇಖರ್ ಮಾಹಿತಿ

■ ವಿಜಯವಾಣಿ ಸುದ್ದಿಜಾಲ ಕಡೂರು

ಪೊಲೀಸರಿಂದ ಹೆಚ್ಚಾಗುತ್ತಿದ್ದ ಮಾನವ ಹಕ್ಕುಗಳ ಉಲ್ಲಂಘನೆ ತಡೆಯಲು ಪೊಲೀಸ್ ದೂರು ಪ್ರಾಧಿಕಾರ ಸ್ಥಾಪಿಸಲಾಗಿದೆ ಎಂದು ವಕೀಲ ಕೆ.ಎನ್. ಚಂದ್ರಶೇಖರ್ ಹೇಳಿದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಾನವ ಹಕ್ಕುಗಳ ಅರಿವು, ರಕ್ಷಣೆ ಮತ್ತು ನೆರವಿನ ಬಗ್ಗೆ ಅಂಗನವಾಡಿ ಕಾರ್ಯಕರ್ತೆಯರಿಗೆ ಹಮ್ಮಿಕೊಂಡಿದ್ದ ಒಂದು ದಿನದ ಜಾಗೃತಿ ಶಿಬಿರದಲ್ಲಿ ಮಾತನಾಡಿದರು.

> ಲೈಂಗಿಕ ದೌರ್ಜನ್ಯ ಪ್ರಕರಣಗಳು ಗಂಡು ಮಕ್ಕಳ ಮೇಲೂ ನಡೆಯುತ್ತಿವೆ. ಅನೇಕ ಉದ್ಯಮಗಳಲ್ಲಿ ಬಾಲ ಕಾರ್ಮಿಕರನ್ನು ಬಳಸಿಕೊಳ್ಳಲಾಗುತ್ತಿದೆ. ಇಂತಹ ಕೃತ್ಯಗಳಿಂದ ಮಕ್ಕಳನ್ನು ರಕ್ಷಿಸುವುದು ಎಲ್ಲರ ಕರ್ತವ್ಯ.
>
> | ಡಿ.ಎನ್.ಮಮತಾ ಬಾಲನ್ಯಾಯ ಮಂಡಳಿ ಸದಸ್ಯೆ

ಬಂಧಿತ ಆರೋಪಿಗಳಿಗೆ ಹಿಂಸೆ, ಬೆದರಿಕೆ ಹಾಕುವುದು, ಅಮಾನವೀಯ ವರ್ತನೆ, ನಿರಪರಾಧಿಗಳ ವಿರುದ್ಧ ದೂರು ದಾಖಲು, ವ್ಯಕ್ತಿ ಘನತೆಗೆ ಧಕ್ಕೆ ಬರುವಂತೆ ವರ್ತಿಸುವುದು ಮಾನವ ಹಕ್ಕುಗಳ ಉಲ್ಲಂಘನೆ ಮಾಡಿದರೆ ಜನರು ಪೊಲೀಸ್ ದೂರು ಪ್ರಾಧಿಕಾರಕ್ಕೆ ದೂರು ಸಲ್ಲಿಸಬಹುದು ಎಂದರು.

ಬಾಲನ್ಯಾಯ ಮಂಡಳಿ ಸದಸ್ಯೆ ಡಿ.ಎನ್.ಮಮತಾ, ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿದ್ದು ಪಾಲಕರು ಈ ಬಗ್ಗೆ ಎಚ್ಚರಿಕೆ ವಹಿಸಬೇಕು. ಬಾಲ ನ್ಯಾಯ ಮಂಡಳಿ ಮತ್ತು ಕಾಯಿದೆ ಸಮಿತಿ ಮಕ್ಕಳ ಹಕ್ಕುಗಳನ್ನು ರಕ್ಷಿಸುವ ಕೆಲಸ ಮಾಡುತ್ತಿರುತ್ತದೆ. ಮಕ್ಕಳು ಅಪರಾಧ ಪ್ರಕರಣದಲ್ಲಿ ಭಾಗಿಯಾಗಿದ್ದರೂ ಅವರನ್ನು ಶಿಕ್ಷಿಸುವುದಿಲ್ಲ. ಕೇವಲ ಅವರ ಮನಪರಿವರ್ತನೆ ಮಾಡುವ ಕೆಲಸ ಮಾಡಬೇಕು ಎಂದರು.

ಪ್ರಧಾನ ಸಿವಿಲ್ ನ್ಯಾಯಾಧೀಶೆ ಅನಿತಾ, ಪತ್ರಕರ್ತರಾದ ಜೆ.ಪಿ.ಯಜಮಾನ ಅಯ್ಯರ್, ಪ್ರಭುಲಿಂಗ ಶಾಸ್ತ್ರಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಜೆ.ಕೆ.ಲಕ್ಷ್ಮೀ, ವಕೀಲರ ಸಂಘದ ಉಪಾಧ್ಯಕ್ಷ ರಾಜು, ವಕೀಲರಾದ ಶೇಖರ್, ದೊಡ್ಡಮ್ಮ, ರಚನಾ ಮಹಿಳಾ ಸಮಾಜದ ಕಾರ್ಯದರ್ಶಿ ಕವಿತಾ ಗೋಪಾಲ್ ಇದ್ದರು.

ಮಾನವ ಹಕ್ಕುಗಳ ಅರಿವು, ರಕ್ಷಣೆ, ನೆರವು ಕಾರ್ಯಾಗಾರದಲ್ಲಿ ಬಾಲ ನ್ಯಾಯ ಮಂಡಳಿ ಸದಸ್ಯೆ ವಕೀಲೆ ಡಿ.ಎನ್.ಮಮತಾ ಮಾತನಾಡಿದರು.